ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,ನೃಪತುಂಗ ರಸ್ತೆ, ಕೆ.ಆರ್ ವೃತ್ತ ಬೆಂಗಳೂರು-01**

ಸಂಖ್ಯೆ: ಸಿ1(6)(PRAB)/03/2021/E-476556 ದಿನಾಂಕ:08-11-2022

**-:ಅಧಿಸೂಚನೆ:-**

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಯಿಂದ ಗ್ರೂಪ್-"ಬಿ" ಡಯಟ್ ಉಪನ್ಯಾಸಕರು(ಕಾರ್ಯಾನುಭವ) ವೃಂದದ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡುವ ಕುರಿತು.

**ಉಲ್ಲೇಖ:**1.ಸರ್ಕಾರದ ಆದೇಶ ಸಂಖ್ಯೆ:ಇಡಿ 01 ಡಿಪಿಐ 2018(ಭಾಗ-6) ಬೆಂಗಳೂರು ದಿನಾಂಕ:06-04-2022
2.ಸರ್ಕಾರದ ಆದೇಶ ಸಂಖ್ಯೆ:ಇಡಿ 250 ಡಿಪಿಐ 2006 ದಿನಾಂಕ:22-02-2008
3.ದಿನಾಂಕ:03-10-2022ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯ ನಡಾವಳಿಗಳು
4.ಸ್ಥಳ ಆಯ್ಕೆ ಪ್ರಕ್ರಿಯೆ ದಿನಾಂಕ:03-10-2022

**************

**ಪ್ರಸ್ತಾವನೆ:-**

ಉಲ್ಲೇಖ(1)ರನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಯಿಂದ ಡಯಟ್ ಉಪನ್ಯಾಸಕರು(ಕಾರ್ಯಾನುಭವ) ಹುದ್ದೆಗಳಿಗೆ ಸಾಮಾನ್ಯ ವಿದ್ಯಾರ್ಹತೆ, ಅನುಭವ ಹಾಗೂ ಸ್ನಾತಕೋತ್ತರ ಪದವಿ ಜೊತೆಗೆ ಬಿ.ಇಡಿ ವಿದ್ಯಾರ್ಹತೆಯುಳ್ಳ ಅರ್ಹರಾಗುವ ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್-1 ವೃಂದದಿಂದ ತುಂಬಲು ಕಾರ್ಯಕಾರಿ ಆದೇಶವಾಗಿರುತ್ತದೆ.

ಗ್ರೂಪ್-"ಬಿ" ತತ್ಸಮಾನ ವೃಂದದ ಹುದ್ದೆಯಾದ ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ವೃಂದದ ಹುದ್ದೆಗಳಿಗೆ ಉಲ್ಲೇಖ(2)ರ ಆದೇಶದನ್ವಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರನ್ನು ನೇಮಕಾತಿ ಪ್ರಾಧಿಕಾರವೆಂದು ನಿಗಧಿಪಡಿಸಿ ಆದೇಶ ಮಾಡಲಾಗಿರುತ್ತದೆ.

ಈ ಸಂಬಂಧ ಇಲಾಖೆಯ ವಿವಿಧ ಕಛೇರಿಯ ಮುಖ್ಯಸ್ಥರಿಂದ ಬಡ್ತಿ ಅರ್ಹರಿರುವ ಶಿಕ್ಷಕರುಗಳ ಬಡ್ತಿ ಪ್ರಸ್ತಾವನೆಗಳನ್ನು ಪಡೆದು ಜ್ಯೇಷ್ಠತೆ/ಇಲಾಖಾ ಪರೀಕ್ಷೆ/ಕಾರ್ಯನಿರ್ವಹಣಾ ವರದಿ/ ವಿದ್ಯಾರ್ಹತೆಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ಬಡ್ತಿಗೆ ಅರ್ಹರಿರುವ ಗ್ರೇಡ್-1 ವೃತ್ತಿ ಶಿಕ್ಷಣ ಶಿಕ್ಷಕರುಗಳ ವಿರುದ್ಧ ಯಾವುದೇ ದೂರು, ಶಿಸ್ತು ಪ್ರಕರಣ ಇಲ್ಲದಿರುವುದನ್ನು ದೃಢಪಡಿಸಿಕೊಂಡು, ದಿನಾಂಕ:03-10-2022ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯಲ್ಲಿ ಮಂಡಿಸಿ ಮುಂಬಡ್ತಿ ಸಮಿತಿಯು ಅರ್ಹರೆಂದು ಪರಿಗಣಿಸಿರುವ 02 ಗ್ರೇಡ್-1 ವೃತ್ತಿ ಶಿಕ್ಷಣ ಶಿಕ್ಷಕರುಗಳಿಗೆ ಡಯಟ್ ಗಳಲ್ಲಿ ಉಪನ್ಯಾಸಕರು(ಕಾರ್ಯಾನುಭವ) ಹುದ್ದೆಗೆ ಬಡ್ತಿ ನೀಡಲು ಉಲ್ಲೇಖ(3)ರ ಸಭಾ ನಡಾವಳಿಯಲ್ಲಿ ನಿರ್ಧರಿಸಲಾಯಿತು.

ಉಲ್ಲೇಖ(3)ರಲ್ಲಿ ಸಭಾ ನಡಾವಳಿ ನಿರ್ಧಾರದಂತೆ ದಿನಾಂಕ:03-10-2022ರಂದು ನಡೆದ ಸ್ಥಳ ಆಯ್ಕೆ ಪ್ರಕ್ರಿಯೆ ಮುಖಾಂತರ ಗ್ರೇಡ್-1 ವೃತ್ತಿ ಶಿಕ್ಷಣ ಶಿಕ್ಷಕರುಗಳು ಆಯ್ಕೆ ಮಾಡಿಕೊಂಡಿರುವ ಹುದ್ದೆ ಮತ್ತು ಸ್ಥಳಗಳಿಗೆ ಬಡ್ತಿ ನೀಡಲು ನಿರ್ಧರಿಸಿದೆ.

**ಆದೇಶ:-**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೇಡ್-1 ವೃತ್ತಿ ಶಿಕ್ಷಣ ಶಿಕ್ಷಕರುಗಳಿಗೆ ಕರ್ನಾಟಕ ರಾಜ್ಯ ಸಿವಿಲ್ ಸೇವಾ(ಬಡ್ತಿ, ವೇತನ, ಮತ್ತು ಪಿಂಚಣಿ ನಿಯಂತ್ರಣ) ಕಾಯ್ದೆ 1973ರ ಭಾಗ-9ರನ್ವಯ (ರೂ.43100-83900) ವೇತನ ಶ್ರೇಣಿ ಗ್ರೂಪ್-"ಬಿ" ಡಯಟ್ ಉಪನ್ಯಾಸಕರು(ಕಾರ್ಯಾನುಭವ) ಹುದ್ದೆಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಾನಪನ್ನ ಬಡ್ತಿ ನೀಡಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಜ್ಯೇಷ್ಠತಾ ಕ್ರಮ ಸಂಖ್ಯೆ | ಗ್ರೇಡ್-1 ವೃತ್ತಿ ಶಿಕ್ಷಣ ಶಿಕ್ಷಕರ ಹೆಸರು ಮತ್ತು ವಿಳಾಸ | ಮುಂಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಹುದ್ದೆ |
|---|---|---|---|
| 01 | 814 | ಸಯ್ಯದ್ ಮಹಮೂದ್ ಗ್ರೇಡ್-1 ವೃತ್ತಿ ಶಿಕ್ಷಣ ಶಿಕ್ಷಕರು ಸರ್ಕಾರಿ ಪ್ರೌಢ ಶಾಲೆ ಕೆ.ಗೊಲ್ಲಹಳ್ಳಿ, ದಕ್ಷಿಣ ವಲಯ-1 | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ನಗರ |
| 02 | 824 | ಭಾಗ್ಯಲಕ್ಷ್ಮೀ ಗ್ರೇಡ್-1 ವೃತ್ತಿ ಶಿಕ್ಷಣ ಶಿಕ್ಷಕರು ಕರ್ನಾಟಕ ಪಬ್ಲಿಕ್ ಶಾಲೆ ಬೂದಿಕೋಟೆ, ಬಂಗಾರಪೇಟೆ ತಾಲ್ಲೂಕು ಕೋಲಾರ ಜಿಲ್ಲೆ. | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ |

**ಷರತ್ತುಗಳು:-**

1. ನಿಗಧಿತ ಇಲಾಖಾ ಪರೀಕ್ಷೆಗಳಿಂದ ಅಕೌಂಟ್ಸ್ ಹೈಯರ್ ಮತ್ತು ಜನರಲ್ ಲಾ ಭಾಗ-1 ತೇರ್ಗಡೆ ಹೊಂದದೇ ಹಾಗೂ ಕನ್ನಡ ಭಾಷಾ ವಿನಾಯಿತಿ ಪಡೆಯದೇ ಇರುವವರ ಹೆಸರು ಒಂದು ವೇಳೆ ಈ ಪಟ್ಟಿಯಲ್ಲಿದ್ದಲ್ಲಿ ಅವರ ಸ್ಥಾನಪನ್ನ ಬಡ್ತಿಗೆ ಅರ್ಹರಿರುವುದಿಲ್ಲವಾದ್ದರಿಂದ, ಸಂಬಂಧಪಟ್ಟ ಡಯಟ್ ಪ್ರಾಂಶುಪಾಲರು, ಈ ಬಗ್ಗೆಯೂ ಪರಿಶೀಲಿಸಿ ವರದಿ ನೀಡುವುದು.
2. ಬಡ್ತಿ ನೀಡಿ ನಿಯುಕ್ತಿಗೊಳಿಸಿದ ಸ್ಥಳಗಳಲ್ಲಿ ಆದೇಶ ತಲುಪಿದ ತಕ್ಷಣ ಕೂಡಲೇ ಕರ್ತವ್ಯಕ್ಕೆ ಹಾಜರಾಗತಕ್ಕದ್ದು,
3. ಈ ಆದೇಶದನ್ವಯ ಸ್ಥಾನಪನ್ನ ಬಡ್ತಿ ಹೊಂದಿದವರು ಒಂದು ವರ್ಷ ಪ್ರೋಭೇಷನರಿ ಅವಧಿಯಲ್ಲಿ ಇರುವರು
4. ಕರ್ತವ್ಯಕ್ಕೆ ಹಾಜರಾದ ಬಗ್ಗೆ ಈ ಕಛೇರಿಗೆ, ಮಹಾಲೇಖಪಾಲರಿಗೆ ಡಿ.ಎಸ್.ಇ.ಆರ್.ಟಿ ನಿರ್ದೇಶಕರಿಗೆ ಸಿ.ಟಿ.ಸಿ ಯೊಂದಿಗೆ ವರದಿ ಸಲ್ಲಿಸುವುದು.
5. ಸ್ಥಳ ಬದಲಾವಣೆಗಾಗಿ ಯಾವುದೇ ರೀತಿಯ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಭಾವ/ಒತ್ತಡ ತಂದಲ್ಲಿ ಮುಂಬಡ್ತಿ ಹೊಂದಲು ಇಚ್ಛೆ ಇರುವುದಿಲ್ಲವೆಂದು ಭಾವಿಸಿ ನಡತೆ ನಿಯಮಗಳನ್ವಯ ಕ್ರಮ ಕೈಗೊಳ್ಳಲಾಗುವುದು.
6. ಬಡ್ತಿ ಹೊಂದಿ ಕರ್ತವ್ಯಕ್ಕೆ ಹಾಜರಾಗುವ ಅಧಿಕಾರಿಗಳ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳ ನೈಜತೆಯನ್ನು ಸಂಬಂಧಿಸಿದ ವಿಶ್ವವಿದ್ಯಾಲಯದಿಂದ ಡಯಟ್ ಪ್ರಾಂಶುಪಾಲರುಗಳು ದೃಢಪಡಿಸಿಕೊಂಡು ನೈಜತೆ ಬಗ್ಗೆ ವರದಿಯನ್ನು ಒಂದು ತಿಂಗಳ ಅವಧಿಯೊಳಗೆ ಈ ಕಛೇರಿಗೆ ಕಳುಹಿಸುವುದು.
7. ಸೇವಾ ಪುಸ್ತಕದಲ್ಲಿ ಬಡ್ತಿ ಆದೇಶವನ್ನು ದಾಖಲಿಸಿ ಸಂಬಂಧಿಸಿದ ಕಛೇರಿ ಮುಖ್ಯಸ್ಥರು ದೃಢೀಕರಿಸುವುದು.
8. ಗ್ರೇಡ್-1 ವೃತ್ತಿ ಶಿಕ್ಷಣ ಶಿಕ್ಷಕರುಗಳು ಸ್ಥಾನಪನ್ನ ಬಡ್ತಿ ಹೊಂದಿದ ಹುದ್ದೆಯ ಮೇಲೆ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ವೇತನ ಪಡೆಯಲು ಮಹಾಲೇಖಪಾಲರಿಂದ ವೇತನ ದೃಢೀಕರಣ(ಪೇ ಸ್ಲೀಪ್) ಪಡೆಯಬೇಕಾಗಿರುವುದರಿಂದ ಆದೇಶದ ಪ್ರತಿ ಕರ್ತವ್ಯಕ್ಕೆ ಹಾಜರಾದ ಬಗ್ಗೆ ಸಿ.ಟಿ.ಸಿ ಮತ್ತು ಮೂಲ ಸೇವಾಪುಸ್ತಕವನ್ನು ಸಂಬಂಧಪಟ್ಟ ಡಯಟ್ ಪ್ರಾಂಶುಪಾಲರ ಮೂಲಕ ಬಡ್ತಿ ಹೊಂದಿದ ಹಾಗೂ ಬಡ್ತಿ ಹುದ್ದೆಯಲ್ಲಿ ಹಾಜರಾದ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಿ ಡಯಟ್ ಪ್ರಾಂಶುಪಾಲರ, ದೃಢೀಕರಣದೊಂದಿಗೆ ಮಹಾಲೇಖಪಾಲರಿಗೆ ನೇರವಾಗಿ ಸಲ್ಲಿಸುವುದು.

09/11/2022

ಡಾ.ವಿಶಾಲ್.ಆರ್.ಭಾ.ಆ.ಸೇ.,
ಆಯುಕ್ತರು ಸ್ಕಾ.ಶಿ.ಇ

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡಗಳು ಬೆಂಗಳೂರು
2. ಮಹಾಲೇಖಪಾಲರು (ಎ) & (ಇ) ಪಾರ್ಕ್ ಹೌಸ್ ರಸ್ತೆ ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ/ಧಾರವಾಡ
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
5. ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ
6. ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ)/ಕ್ಷೇತ್ರ ಶಿಕ್ಷಣಾಧಿಕಾರಿಗಳು/ಮುಖ್ಯ ಶಿಕ್ಷಕರು ರವರುಗಳಿಗೆ ಅಗತ್ಯಕ್ರಮಕ್ಕಾಗಿ
7. ಸಂಬಂಧಿಸಿದ ಶಿಕ್ಷಕರಿಗೆ
8. ಕಛೇರಿ ಪ್ರತಿ